

ನಡೆ ತೀರಾ ನಿಧಾನಗತಿಯದು ಅನಿಸಿದೆ. ಕೆಲವೆಲ್ಲ ಗಮನಾರ್ಹ ಕೃತಿಗಳು ನಮ್ಮ ನಡುವೆ ಬಂದಿವೆ. ಅಂಥವನ್ನ ಬೇರೆಯವರಿಗೆ ಮುಟ್ಟಿಸುವ ಕೆಲಸ ಖಂಡಿತ ಮಾಡುತ್ತಿದ್ದೇನೆ. ನಿರೀಕ್ಷೆಗಳು ಸಾಕಷ್ಟಿವೆ. ಆಗುತ್ತಿರುವ ಕೆಲಸ ತುಂಬಾ ತುಂಬಾ ಕಡಿಮೆ.

◆ **ಕನ್ನಡದಲ್ಲಿನ ಮಕ್ಕಳ ಸಾಹಿತ್ಯದ ಬಗೆಗಿನ ನಿಮ್ಮ ನಿರೀಕ್ಷೆಗಳೇನು?**

ಕನ್ನಡವೂ ಸಂಪದ್ಭರಿತವಾಗಿ ಬೆಳೆಯಬೇಕು. ಮಕ್ಕಳ ಸಾಹಿತ್ಯದ ರಂಗವೂ ದೊಡ್ಡದಾಗಿ ವಿಜೃಂಭಿಸಬೇಕು ಎಂದು ಯಾರು ಭಾವಿಸಲಿಕ್ಕಿಲ್ಲ? ಕನ್ನಡದ ಪುಸ್ತಕ ಪ್ರದರ್ಶನಗಳಲ್ಲಿ ದೊಡ್ಡವರ ಪುಸ್ತಕಗಳೇ ಒಮ್ಮೆಲೇ ಎದ್ದುಕಾಣುವುದು, ಮಕ್ಕಳ ಸಾಹಿತ್ಯದ ಪುಸ್ತಕಗಳು ಎಲ್ಲೋ ಮರೆಯಲ್ಲಿ ನಾಚಿಗೆಯಿಂದ ಅಡಗಿಕೊಂಡಂತಿರುತ್ತವೆ. ನಮ್ಮಲ್ಲಿ ಇದುವರೆಗೂ ಯಾವ ಪ್ರಕಾಶಕರೂ ಮಕ್ಕಳ ಸಾಹಿತ್ಯಕ್ಕೆ ನಿಡಿದಾಗಿ ತೆರೆದುಕೊಂಡು ಪ್ರಯೋಗಗಳನ್ನು ಮಾಡುತ್ತ ಸೊಗಸಿನ ಪುಸ್ತಕಗಳನ್ನು ತರುವವರನ್ನು ಕಂಡಿಲ್ಲ. ಪ್ರತಿಯೊಬ್ಬ ಪ್ರಕಾಶಕರ ಮೊದಲ ಆದ್ಯತೆಯೇ ಮಕ್ಕಳ ಪುಸ್ತಕಗಳ ಪ್ರಕಟಣೆ ಮಾಡುವುದಾಗಬೇಕೆಂದೇನೂ ಹೇಳುತ್ತಿಲ್ಲ. ಆದರೆ ಬಹಳ ಪ್ರೀತಿಯಿಂದ ಅದೊಂದು ಅಗತ್ಯವೆಂದು ಮಕ್ಕಳ ಪುಸ್ತಕಗಳನ್ನು ಪ್ರಕಟಿಸಬೇಕೆಂದು ಮಾತ್ರ ಒತ್ತಾಯಿಸುವೆ. ಇಷ್ಟರ ಮಧ್ಯೆಯೂ 'ಅಭಿನವ', 'ನವಕರ್ನಾಟಕ' ಪ್ರಕಾಶನದಂಥ ಕೆಲ ಪ್ರಕಾಶಕರು ಒಂದಷ್ಟು ಆಸಕ್ತಿಯಿಂದ ಮಕ್ಕಳ ಪುಸ್ತಕಗಳನ್ನು ತರುತ್ತಿರುವುದನ್ನೂ ಗಣಿಸಬೇಕಿದೆ.

ಈಗೀಗ ಚೆನ್ನೈನ ಇಂಗ್ಲಿಷಿನ ಪಿಕ್ಚರ್ ಬುಕ್ಕುಗಳು ಮಾರುಕಟ್ಟೆಯನ್ನು ಅವರಿಸಿಕೊಳ್ಳುತ್ತಿದ್ದಂತೆ, ಗಡಬಡಿಸಿ ಎಚ್ಚರಗೊಂಡಂತೆ ಕೆಲವರಾದರೂ ಹೊರಳಿಕೊಳ್ಳುತ್ತಿರುವುದು ಆಶಾದಾಯಕ ಸಂಗತಿ. ಬಣ್ಣ ಬಣ್ಣದ ಗುಣಮಟ್ಟದಲ್ಲೂ ಗಮನಸೆಳೆಯುವ ಕೃತಿಗಳು ವಿರಳವಾಗಿಯಾದರೂ ಈಗ ಸೆಳೆಯತೊಡಗಿವೆ. ಲೈಬ್ರರಿಗಳಲ್ಲಿ ವಿಶೇಷದ ವ್ಯವಸ್ಥೆಗಳಾಗಬೇಕು. ವಿಶ್ವವಿದ್ಯಾಲಯಗಳು ಕಣ್ಣುತೆರೆಯಬೇಕು. ಅಕಾಡೆಮಿಗಳಂಥ ಸಂಸ್ಥೆಗಳು ಇದು ಕೂಡ ನಮ್ಮ ಅಗತ್ಯದ ಕೆಲಸ ಎನ್ನುವುದನ್ನು ಅರಿತುಕೊಳ್ಳಬೇಕು. ದೇಶದಲ್ಲಿ ಈಗ ಕೇರಳದಲ್ಲಿ, ರಾಜಸ್ಥಾನದಲ್ಲಿ ಮಾತ್ರ ಮಕ್ಕಳ ಸಾಹಿತ್ಯಕ್ಕೇ ಪ್ರತ್ಯೇಕ ಸಂಸ್ಥೆಗಳು ಸರ್ಕಾರಿ ಆಸರೆಯಲ್ಲಿ ನಡೆಯತೊಡಗಿವೆ. ಎಲ್ಲಕ್ಕೂ ಮೊದಲು ಇದೊಂದು ಗಂಭೀರವಾದ ಓದು ಅನಿಸಬೇಕು. ಕೇವಲ ಮಕ್ಕಳಷ್ಟೇ ಅಲ್ಲ, ದೊಡ್ಡವರ ಓದಿನ ಭಾಗವಾಗಬೇಕು. ಹೀಗೆ ನಿರೀಕ್ಷೆಗಳೇನೋ ಬೆಟ್ಟದಷ್ಟು... ●